ಮಾತಿನ ಲಯ ಸಿಕ್ಕಿರುತ್ತದೆ. ಅದೂ ಕೂಡ ಮಾತಾಡುತ್ತದೆ. ತಂದೆ ತಾಯಂದಿರು ನಮ್ಮನ್ನು ಪೋಷಿಸುತ್ತಲೇ ನಮ್ಮ ಒಳಗಡೆ ವಿಚಿತ್ರವಾದ ನಾದದ ಗುಡಿಗಳನ್ನು ಕಟ್ಟುತ್ತಾರೆ. ಅವುಗಳಲ್ಲಿ ಶಕ್ತಿ ಪ್ರತಿಷ್ಠಾಪನೆ ಮಾಡುತ್ತಾರೆ. ಅಲ್ಲಿಯ ಚೈತನ್ಯ ದೀಪದ ಬೆಳಕಿನಂತೆ ಮೈಯೆಲ್ಲಾ ತುಂಬಿಕೊಳ್ಳುತ್ತದೆ. ಅದಕ್ಕಾಗಿಯೇ ತಂದೆ ತಾಯಿ ಕಳೆದುಹೋದಾಗ ಆ ನಾದದ ಗುಡಿಗಳು ಅಲುಗಾಡ ಹತ್ತುತ್ತವೆ. ದೀಪಗಳು ಬಿರುಗಾಳಿಗೆ ಸಿಕ್ಕಂತೆ ನಲುಗುತ್ತವೆ. ಆ ಸ್ಥಾನಗಳನ್ನು ತುಂಬಲು ಯಾರಿಂದಲೂ ಆಗುವುದಿಲ್ಲ. ಬಹುಶಃ ತಂದೆತಾಯಿಗಳಿಗೆ ದೇವರೆಂದು ಈ ಅರ್ಥದಲ್ಲಿಯೇ ಕರೆಯುತ್ತಿರಬಹುದು!"

"ಏನ ಬದುಕು ಚಂದೈತಿ ಅಂತ ಇರಬೇಕು! ನೀನ ಹೇಳು? ಎಷ್ಟರ ಜೊತೆ ಗುದ್ದಾಡಬೇಕು. ಅವ್ವನ ತೊಡಿಯಾಗ ಸಣ್ಣ ಮಕ್ಕಳಿದ್ದಾಗ ನಕ್ಕಿದ್ದss ಕೊನೇ ಸುಖ ಅಂತ ಕಾಣುತ್ತ. ಆಗ ಏನೂ ಗೊತ್ತಿರುವುದಿಲ್ಲ. ಮೈ ಅನ್ನೂದು, ಆಗ ಬಿಡಿಸಿಕೊಂಡ ಬಂದ ಹತ್ತೀ ತೊಳಿ ಇದ್ದಾಂಗ ಇರತೈತಿ. ಮನಸ್ಸು, ಅದಕೇನ ಗೊತ್ತಾಗತ್ತ ಆವಾಗ. ಬಿತ್ತೂದಕ್ಕಿಂತ ಮೊದಲಿನ ಹಸಿಮಣ್ಣು ಇದ್ದಾಂಗ ಇರತೈತಿ. ತಂದಿ ತಾಯಿ ಆರೈಕೆಯೊಳಗ ಹ್ಯಾಗೋ ಬೆಳೆದ ಬಿಡ್ತೀವಿ. ಅವರಿಗೆ ವಯಸ್ಸಾಗಾಕ ಹತ್ತತೈತಿ, ನಾವು ಬೆಳಿಯಾಕ ಸುರು ಹಚಗೊಂತೀವಿ. ದೇಹಾನೂ ಬೆಳಿತೈತಿ, ಹುತ್ತದೊಳಗಿನ ಹಾವಿನ್ಹಾಂಗ ಮನಸ್ಸೂ ಬೆಳೀತೈತಿ. ಆಸರಕ ಇದ್ದ ಒಂದೊಂದು ಕಂಬ ಬೀಳಾಕ ಹತ್ತತಾವು, ಕಂಬ ಬೀಳಾಕ ಹತ್ತಿದ್ಹಾಂಗ ಮನೀ ತೊಲಿ, ಜಂತಿ ನಡಗಾಕ ಹತ್ತತಾವು. ದಿನ ಕಳದ್ಹಾಂಗ ಆಸರ ಕಡಿಮಿ ಆಗಿಕೊಂತ, ಒಬ್ಬರ ಆದಿವೇನ ಅನಸ್ತದ. ಬದುಕು, ಹ್ಯಾಂಗ ಸರಿಯಾಗಿ ಬದುಕಬೇಕಂದ್ರು, ಒಬ್ಬಬ್ರ ಮನಸ್ಸ ಒಂದೊಂದ ನಮೂನಿ ಆಗತ್ತ. ಈ ಮನಸ್ಸಂದ್ರ ಏನು? ಮಂಗ್ಯಾನ ಕಟಗೊಂಡು ಸಂತೀಗೆ ಹೋದಾಂಗೈತಿ. ನಮಗ ಬೇಕಾದದ್ದ ಬೇರೇ, ಇದೂ ಕೇಳೂದ ಬೇರೆ. ಇದರ ಜೊತೆಗಿನ ಗುದ್ಯಾಟದೊಳಗ ಸಂಜೀಹೊತ್ತು ಬಂದ ಬಿಡತ್ತ. ನಾವು ಸುಡಗಾಡಕಡೆ ಮುಖ ಮಾಡಿದಾಗ, ಮಕ್ಕಳು ಮದುವಿ ಸಂಭ್ರಮದೊಳಗಿರ್ತಾವು. ಈ ಮಕ್ಕಳನ್ನೂದು ಏನ ಸೌಭಾಗ್ಯಾನೋ ಏನೋ! ಕರೀ ಚಾಳೀಸ ಹಾಕ್ಕೊಂಡು ರಾತ್ರಿ ಗಾಡಿ ಬಿಡ್ತಾವು. ಮೊದಲ ಕತ್ತಲಂದ್ರ ಕತ್ತಲ, ಅದರ ಮ್ಯಾಲೆ ಕರೀ ಚಾಳೀಸು, ಕೆಳಗ ನಿಶೆಯಾದ ಗಾಡಿ. ಇವರ ಏನ ಮುಟ್ಟತಾರೋ, ಹಾದಿ ಮ್ಯಾಲೆ ಬಿದ್ದು ಹೋಗ್ತಾರೋ, ಇವರ ಆಟ ನೋಡಿದ್ರ ಹುಚ್ಚರಾಸ್ಪತ್ರೆ ನೋಡಿ ಬಂದ್ಹಾಂಗಾಗತ್ತ. ಆದರೂ ಮಕ್ಕಳಲ್ಲ, ಮೊಮ್ಮಕ್ಕಳು ಕೊಡಾವು, ಮನಿದೀಪ ಬೆಳಗೂವ್ಹಂಗ ನೋಡಿಕೊಳ್ಳಾವು, ಇವು ಇಲ್ಲಂದ್ರ ಏತೇನು? ಏನೂ ಇಲ್ಲ. ಆದ್ರ ಈಗ ಆಗೂದ ನೋಡಿದ್ರ ನಾಲಿಗೆ ಒಣಗತೈತಿ. ನೋಡು! ಬರಬರ್ತ ಎಷ್ಟ ಬಿಸಿಲು ಹೊಡಿಯಾಕ ಹತ್ತೈತಿ. ರಣರಣ ಬಿಸಿಲು. ತೆರೆದ ಹತಾರ. ಇದರ ಬಾಯಿಗೆ ಸಿಕ್ಕರ ಯಾರು ಉಳದಾರು? ಪ್ಲೇಗು, ಕಾಲರಾ ಬಂದ್ರ ಹ್ಯಾಂಗರ ಉಳಿಬಹುದು. ಇಂಥ ಬಿಸಿಲಾಗ ಸಿಕ್ಕ ಜೀವ ಹ್ಯಾಂಗ ಉಳಿದೀತು? ಸೂರ್ಯ, ಸೂರ್ಯನ ಬೆಳಕು ತಾಯಿ ತೊಡಿ ಇದ್ದಾಂಗ. ಅದ ಉರಿಯಾಕ ಹತ್ತಿದರ ಉಳಿಯೂದು ಹ್ಯಾಂಗ? ನಾಲಿಗೆ ಒಣಗೈತಿ. ನಾಲ್ಕೂ ಕಡೆ ಝಳ. ಬೊಗಸ್ಯಾಗ ಎತ್ತೇನಂದ್ರೂ ಹನಿ ನೀರಿಲ್ಲ. ನೀರ ಅಂದ್ರ ಏನೂ ಅಂತ ಕೇಳು ಹೊತ್ತ ಬರಾಕ ಹತ್ತೈತಿ! ಕೇಳ್ದೆ ಇಲ್ಲ? ನಾಲ್ಕ ಹರದಾರಿ ನಡೆದ ಬಂದಾವ, ಹೊಲದಾಗಿನ ಪೈಪಿನೊಳಗ ನೀರ ಬರೂದ ನೋಡಿ, ಕುಡಕೊಂತ ಕುಡಕೊಂತ ಪ್ರಾಣಾ ಬಿಟ್ಟನಂತ! ಹಿಂಗ ಯಾಕ ಅಂತ ಕೇಳ್ತಿಯಾ? ಇಲ್ಲಿ ಎಲ್ಲಾ ಮರೆಯಾಗ್ತಾ ಐತಿ. ಬರೀ ಮನ್ಯಾಗ ಕುಂತ್ಹಾಂಗ ಅನಿಸ್ತೈತಿ. ಭೂಮಿ ಮ್ಯಾಲೀನೂ ನೀರಿಲ್ಲ, ಕಣ್ಣಾಗೂ ನೀರಿಲ್ಲ, ಮೈ, ಕೈಯಾಗಿನ ಬೆವರ, ನೀರ ಅನ್ನೂದಾದ್ರ ಅದನ್ನ